ಸ್ವಲ್ಪವೂ ಆಚೀಚೆ ಆಗಬಾರದು. ಕಣ್ಣೋಟದ ತೀರ್ಮಾನ ಸರಿಯಾಗಿಯೇ ಇರುತ್ತದೆ. ಈ Eye Judgement ಕೈಯಿಂದ ಬ್ರಶ್ಯ್ ಮೂಲಕ ಕಾಗದದ ಸ್ಪರ್ಶ ಕಾಣುವಾಗಲೇ ಎಡವಟ್ಟಾಗಿಬಿಡುತ್ತದೆ. ತುಸುವೇ ಹೆಚ್ಚು ಕಡಿಮೆಯಾದರೂ ಆಕಾರ ವಿಕಾರವಾಗಿಬಿಡುತ್ತದೆ. ಈ ಅಳುಕಿನಿಂದ ಬ್ರಶ್ ಸ್ಟ್ರೋಕ್ ಗತಿಯನ್ನು ಕಳೆದುಕೊಳ್ಳುತ್ತದೆ. ಬ್ರಶ್ಶಿನ ಚಲನೆಯ ಗತಿಯನ್ನು, ವೇಗವನ್ನು ಕಳೆದುಕೊಂಡ ಚಿತ್ರದ ಸ್ಥಿತಿ ಕಂಗಾಲಾಗಿ ಕಳಾಹೀನವಾಗದೇ ಇನ್ನೇನಾದೀತು!

'ಕೆಡಿಸಬ್ಯಾಡರಿ ಕಾಗದ ಗರತಿಯ...' ಅಂತ ಕಲಬುರ್ಗಿಯವರು ಹೇಳಿದ್ದನ್ನು ನಾನು ಓದುವುದಕ್ಕೂ ಮುಂಚೆಯೇ 'ಕಾಗದವನ್ನು ಕೆಡಿಸಬಾರದು, ಚಿತ್ರವನ್ನು ಕೆಡಿಸಬಾರದು' ಎಂಬುದು ನನ್ನಲ್ಲಿ ಮನೆ ಮಾಡಿತ್ತು. ಇದರಿಂದ ನಾನು ಬಣ್ಣಗಳನ್ನು ಬಹು ಜಾಗರೂಕತೆಯಿಂದ ಬಳಸುತ್ತಿದ್ದೆ. ಒಮ್ಮೆ ಡಾರ್ಕ್ ಕಲರ್ ಒಗೆದು ಬಿಟ್ಟರೆ, ಅದನ್ನು ಹಿಂತೆಗೆಯುವುದಕ್ಕೆ ಆಗುವುದಿಲ್ಲವಲ್ಲ, ಹಾಗಾಗಿ ಕಲರ್ ಹಾಕಬೇಕಾದಾಗ ಮೀನಮೇಷ ಎಣಿಸುವುದು ಅಂತಾರಲ್ಲ ಆ ಥರ ಅಳೆದು ತೂಗಿ ನೋಡುವ ಗುಣ, ನಿಧಾನವೇ ಪ್ರಧಾನ ಎಂಬ ಗುಣ ಮತ್ತು ಮಿತವ್ಯಯ ಗುಣಗಳು ನನ್ನಲ್ಲಿ ಮೈಗೂಡಿದವು. ಕಲಾವಿದರಿಗೆ ಬೇಕಾದ ಇನ್ನೊಂದು ಗುಣ ತಾಳ್ಮೆ, ಅದೂ ಅಭ್ಯಾಸಬಲದಿಂದ ಬೆಳೆದುಬಂತು. ಈ ಎಲ್ಲ ಗುಣಗಳು ಚಿತ್ರ ರಚನೆಯಲ್ಲಿ ಮಾತ್ರವಲ್ಲದೇ ನನ್ನ ವ್ಯಕ್ತಿತ್ವದಲ್ಲೂ ಬೆಳೆದುಬಿಟ್ಟಿವೆ ಅನಿಸುತ್ತದೆ. ನಾನು ಯಾವುದಾದರೂ ಕೆಲಸಕ್ಕೆ ಕೈ ಹಾಕಿ ಅದರ ಸಾಧಕ ಬಾಧಕಗಳನ್ನು ಯೋಚಿಸುವಾಗ ನನ್ನವಳು 'ಎಷ್ಟು ಮಿಜಿಮಿಜಿ ಮಾಡ್ತೀ...' ಎಂದು ಹಂಗಿಸಿದಾಗ ನನಗದು ಅರಿವಿಗೆ ಬರುತ್ತದೆ. ಇನ್ನು ನನ್ನ ಮಿತವ್ಯಯ ನೀತಿಯನ್ನು ನಾನೇ ಒಪ್ಪಿಕೊಳ್ಳುತ್ತೇನೆ. ಇದನ್ನು ಕೇವಲ ಆರ್ಥಿಕವಾಗಿ ಅನುಸರಿಸುತ್ತಿದ್ದರೆ ನನಗೇನೂ ಬೇಜಾರು ಇರುತ್ತಿರಲಿಲ್ಲ. ಆದರಿದು ನನ್ನ ಮಾತು-ಕತೆ, ಸಂಬಂಧ, ಸಂಪರ್ಕ... ಇಂಥವುಗಳಲ್ಲಿಯೂ ಮಿತವ್ಯಯ ನೀತಿ ಅಳವಡಿಕೆಯಾಗುತ್ತಿರುವುದರಿಂದ ನನಗೆ ನನ್ನ ಮೇಲೆ ಭಯಂಕರ ಬೇಜಾರಾಗಿ, ಇದನ್ನು ಪರಿಹರಿಸಿಕೊಳ್ಳುವ ಬಗೆಯೆಂತು ಎಂದು ಚಿಂತಿತನಾಗಿದ್ದೇನೆ.

ಚಿತ್ರರಚನೆಯಿಂದ ನನ್ನಲ್ಲಿ ಮೈಗೂಡಿದ ಕೆಲ ಗುಣಗಳು ನನ್ನನ್ನು ಕಾಪಾಡಿದ್ದೂ ಇದೆ. ಅದರಲ್ಲಿ ತಾಳ್ಮೆಯ ಕೊಡುಗೆ ದೊಡ್ಡದು. 'ತಾಳ್ಮೆಗಿಂತ ಅಧಿಕ ತಪವಿಲ್ಲ' ಅನ್ನುವ ಒಂದು ಮಾತಿದೆ. ತಕ್ಕಮಟ್ಟಿಗೆ ನನ್ನಲ್ಲಿ ಈ ಗುಣ ಬೆಳೆದಿದ್ದರೆ ಅದಕ್ಕೆ ಕಾರಣ ನನ್ನ ಚಿತ್ರಾಭ್ಯಾಸವೇ. ಹಾಗೆಯೇ ಇನ್ನೊಂದು ಗುಣ, ಇರುವುದನ್ನು ಇರುವಂತೆ, ನೈಜವಾಗಿ ಚಿತ್ರಿಸಲು ಹಾತೊರೆಯುವುದು. ಬಿಂದುವಿನಷ್ಟು ಕೃತ್ರಿಮತೆ ತೋರಿದರೂ ಅದು ಮೊಸರಲ್ಲಿ ಕಲ್ಲು ಸಿಕ್ಕಂತಾಗುತ್ತದೆ. ಇದು ನನಗೆ ವಾಸ್ತವವನ್ನು ಅರ್ಥಮಾಡಿಕೊಳ್ಳುವುದು, ಅದನ್ನು ಒಪ್ಪಿಕೊಳ್ಳುವುದು, ಅದರಂತೆ ಬದುಕುವುದನ್ನು ಸಹ ಕಲಿಸಿದೆ.

ಕೆಲವು ಸಂದರ್ಭಗಳಲ್ಲಿ ನಾನು ಧಾರಾಳಿಯಾಗುವುದು ಇದೆ. ಅದು ಪರಿಚಿತವಲ್ಲದ ವ್ಯಕ್ತಿಯನ್ನು ಚಿತ್ರಿಸುವಾಗ. ಅನಾಮಿಕ ವ್ಯಕ್ತಿಯನ್ನು ಅಭ್ಯಾಸಕ್ಕೆಂದು ಚಿತ್ರಿಸುವಾಗ ಯಾವ ಅಳುಕು ಇರುವುದಿಲ್ಲ. ನಾನಾಗಲೀ ನೋಡುಗರಾಗಲೀ ಅನಾಮಿಕ ವ್ಯಕ್ತಿಯ ಚಿತ್ರಣದಲ್ಲಿ ಕುರುಹನ್ನು ಹುಡುಕುವ ಸಾಧ್ಯತೆ ಇರುವುದಿಲ್ಲವಾದ್ದರಿಂದ ತದ್ರೂಪು ತರುವ ಅವಶ್ಯಕತೆ ಇಲ್ಲಿ ಇರುವುದಿಲ್ಲ. ಒಂದು ಬಗೆಯ ಸ್ವಾತಂತ್ರ್ಯ ಲಭಿಸಿ ಬಿಡುಬೀಸಾಗಿ ಬ್ರಶ್ಶನ್ನು ಎಳೆಯಲು ಸಾಧ್ಯವಾಗುತ್ತದೆ. ಭಿತ್ತಿಯ ಮೇಲೆ ಮೂಡಿರುವ ತೀವ್ರಗತಿಯ ರೇಖೆಗಳಾಗಲಿ, ಕುಂಚದ ಎಳೆತಗಳಾಗಲಿ ಕಲಾವಿದನ ದೃಷ್ಟಿಯ ಸೂಕ್ಷ್ಮತೆ, ನಿಖರತೆಯನ್ನು ತೋರಿಸುತ್ತವೆ. ಇದೆಲ್ಲವನ್ನು ನೋಡಿದರೆ, 'ಪರಿಚಿತ' ಎಂಬ ಸಂಬಂಧವೇ ಬಂಧವಾಗಿ ರಚನೆಯಲ್ಲಿ ತೊಡಕಾಗುತ್ತದೆ ಎನಿಸುತ್ತದೆ. ಕಲಾಚಿಂತಕರು ಹೇಳುವ 'ಮಾನಸಿಕ ದೂರ' ಇಲ್ಲಿ ಅನ್ವಯಿಸಿಕೊಳ್ಳಬೇಕಾ ಅಂತ ಯೋಚಿಸಿದರೆ ಈ ಸಂದರ್ಭಕ್ಕೆ ಅದು ದೊಡ್ಡ ತತ್ವವಾಯಿತೆನಿಸುತ್ತದೆ.

ಈ ವಾಟರ್ ಕಲರ್ ಯಾಕೆ ನನ್ನಂತವರ (ಸೋಮಾರಿಗಳ) ಮಾತು ಕೇಳುವುದಿಲ್ಲವೆಂದರೆ... ಈ ಬಣ್ಣದ ವಾಹಕವಾಗಿರುವುದು ನೀರು. ನೀರಿಗೆ ಹರಿಯುವ ಗುಣ ಇರುವುದರಿಂದ ಇದು ನಿಂತಲ್ಲೇ ನಿಲ್ಲುವುದಿಲ್ಲ, ಇಳಿಜಾರಿನ ಕಡೆ ತಳ ಬಿಡುವುದೇ ಇದರ ಮೂಲಗುಣ. ಅದೇ ಪೆನ್ಸಿಲ್, ಕ್ರೆಯಾನ್ಸ್, ಪೇಸ್ಟಲ್‌ಗಳು ನಮ್ಮ ಕೈಯೊಳಗೇ ಇರುವುದರಿಂದ ನಾವು ನಡೆಸಿದಂತೆ ನಡೆಯುತ್ತವೆ, ಎಳೆದ